ವಿಕ್ಟೋರಿಯಾ ಆಸ್ಪತ್ರೆಗೆ ಬಂದಾಗ ವಿಪರೀತ ಸುಸ್ತಾಗಿದ್ದ. ತಪಾಸಣೆ ಮಾಡಿದಾಗ ಆತನ ಕಿಡ್ನಿಯಲ್ಲಿ ಕ್ರಿಯಾಟಿನಿನ್ ಮಟ್ಟ 44 ಇತ್ತು. ಆಸ್ಪತ್ರೆಯ ವೈದ್ಯಕೀಯ ಇತಿಹಾಸದಲ್ಲೇ ಇಷ್ಟು ಜಾಸ್ತಿ ಇದ್ದ ಕ್ರಿಯಾಟಿನಿನ್ ನಾನು ನೋಡಿದ್ದು ಇದೇ ಮೊದಲು. ಇಂಥ ಪರಿಸ್ಥಿತಿಗೆ 'ಕ್ರಿಯಾಟಿನೂರಿಯ' ಎಂದು ಹೆಸರು. ವಿಪರೀತ ಜ್ವರ ಬಾಧೆ ಇದ್ದವರಲ್ಲಿ, ಪುರುಷರ ಪ್ರಾಸ್ಟೇಟ್ ಹಾಗೂ ಯಕೃತ್ ಕ್ಯಾನ್ಸರ್ ಇರುವವರಲ್ಲಿ ಕ್ರಿಯಾಟಿನಿನ್ ಮಟ್ಟ ಹೆಚ್ಚು ಕಡಿಮೆಯಾಗುತ್ತಲೇ ಇರುತ್ತದೆ.

### ◆ ಕಿಡ್ನಿ ಕಲ್ಲುಗಳಿಂದಾಗುವ ಅಪಾಯಗಳೇನು?

ಕಿಡ್ನಿ ಸಮಸ್ಯೆ ಬರಲು ಕಾರಣಗಳು ಹಲವಾರು. ಕೆಲವರಿಗೆ ಹುಟ್ಟಿನಿಂದಲೇ ಮೂತ್ರನಾಳ ದೊಡ್ಡದಾಗಿರುತ್ತದೆ ಅಥವಾ ತೀರಾ ಚಿಕ್ಕದಾಗಿರುತ್ತದೆ. ಇನ್ನು ಕೆಲವೊಮ್ಮೆ ಕಿಡ್ನಿಯೊಳಗೇ ಕಲ್ಲು ಉತ್ಪತ್ತಿಯಾಗಿರುತ್ತದೆ. ಇದು ಕಿಡ್ನಿಯನ್ನು ಹಾನಿಗೊಳಿಸುತ್ತದೆ. ಯೂರಿಕ್ ಆ್ಯಸಿಡ್ ಹೆಚ್ಚಾದರೆ ಕಿಡ್ನಿ ಕಲ್ಲುಗಳಾಗುತ್ತದೆ. ಮಧುಮೇಹ ನಿಯಂತ್ರಣದಲ್ಲಿ ಇರದಿದ್ದರೆ, ನಿರಂತರವಾಗಿ ಮೂತ್ರನಾಳದ ಸೋಂಕು ಉಂಟಾಗಿದ್ದರೆ ಕಿಡ್ನಿ ಸಮಸ್ಯೆ ಬರುತ್ತದೆ. ಇದರಿಂದ ಕಾಲು, ಮುಖ ಊತ, ವಿಪರೀತ ಆಯಾಸ, ತಲೆನೋವು, ಕಣ್ಣು ಮಂಜಾಗುವುದು, ಮೂತ್ರದಲ್ಲಿ ರಕ್ತ ಹೋಗುವುದು, ಮೂತ್ರ ವಿಸರ್ಜನೆ ಮಾಡುವಾಗ ನೊರೆ ನೊರೆಯಾಗುವುದು ಮುಂತಾದ ಲಕ್ಷಣಗಳನ್ನು ಕಾಣಬಹುದು.

### ◆ ಕಿಡ್ನಿ ಸಮಸ್ಯೆಯನ್ನು ತಡೆಗಟ್ಟುವುದು ಹೇಗೆ?

ಕೆಲವೊಮ್ಮೆ ರೋಗಿಗಳ ದೇಹದಲ್ಲಿ ಹೆಚ್ಚಿನ ಪ್ರಮಾಣದ ನೀರು ತುಂಬಿರಬಹುದು. ಇಂಥ ಸಮಯದಲ್ಲಿ ರೋಗಿ ಕಡಿಮೆ ನೀರು ಕುಡಿಯುವಂತೆ ವೈದ್ಯರು ಸಲಹೆ ನೀಡಬಹುದು. ಇನ್ನೂ ಕೆಲವರಿಗೆ ದೇಹದಿಂದ ನೀರಿನ ಅಂಶ ಹೊರಹೋಗಿ ನಿರ್ಜಲೀಕರಣವೂ ಉಂಟಾಗಬಹುದು. ಇಂಥ ರೋಗಿಗಳಿಗೆ ಒಆರ್‌ಎಸ್ ನೀಡಬೇಕಾಗುತ್ತದೆ. ವಿವಿಧ ಔಷಧಿಗಳು, ಆ್ಯಂಟಿಬಯಾಟಿಕ್‌ಗಳು, ಸ್ಟೀರಾಯ್ಡ್‌ಗಳ ಬಳಕೆಯಿಂದ ದೇಹದಲ್ಲಿ ಪೊಟಾಶಿಯಂ ಹೆಚ್ಚಾಗಿ ಸಂಗ್ರಹವಾಗಿ ಮೂತ್ರಪಿಂಡಗಳಿಗೆ ಹಾನಿಯಾಗುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ ಪೊಟಾಷಿಯಂ ಮಟ್ಟ ಕಡಿಮೆ ಮಾಡುವ ಔಷಧಿಯನ್ನು ವೈದ್ಯರು ನೀಡಬೇಕಾಗುತ್ತದೆ. ಮಧುಮೇಹ ಅನಿಯಂತ್ರಿತವಾದಾಗ ಕಿಡ್ನಿ ಸಮಸ್ಯೆ ಬರುವ ಸಾಧ್ಯತೆ ಹೆಚ್ಚಿರುವುದರಿಂದ ಕಡ್ಡಾಯವಾಗಿ ರಕ್ತ ಹಾಗೂ ಮೂತ್ರ ಪರೀಕ್ಷೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ತೆಗೆದುಕೊಳ್ಳಬೇಕು.

### ◆ ಡಯಾಲಿಸಿಸ್ ಎಂದರೇನು, ಇದರ ಪ್ರಕಾರಗಳು ಯಾವುವು?

ರಕ್ತವನ್ನು ಶುದ್ಧೀಕರಿಸಲು ಮತ್ತು ವಿಷ ಮತ್ತು ಇತರ ತ್ಯಾಜ್ಯ ವಸ್ತುಗಳಿಂದ ಮುಕ್ತಗೊಳಿಸಲು ಮೂತ್ರಪಿಂಡಗಳು ಹಗಲು ರಾತ್ರಿ ಕೆಲಸ ಮಾಡುತ್ತವೆ. ಇದರ ಜೊತೆಗೆ, ಮೂತ್ರಪಿಂಡಗಳು ಮೂಳೆಗಳ ಆರೋಗ್ಯ ಮತ್ತು ರಕ್ತದ ಉತ್ಪಾದನೆಗೆ ಸಂಬಂಧಿಸಿದ ಕೆಲವು ಹಾರ್ಮೋನುಗಳನ್ನು ಸಹ ಉತ್ಪಾದಿಸುತ್ತವೆ. ಮೂತ್ರಪಿಂಡಗಳು ರಕ್ತದಿಂದ ತ್ಯಾಜ್ಯವನ್ನು ತೆಗೆದು ಹಾಕುವ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದಿದ್ದಾಗ, ಯಂತ್ರಗಳ ಸಹಾಯದಿಂದ ಈ ಕೆಲಸವನ್ನು ಕೃತಕವಾಗಿ ಮಾಡಬೇಕಾಗುತ್ತದೆ. ಈ ಪ್ರಕ್ರಿಯೆಯೇ ಡಯಾಲಿಸಿಸ್.

ಡಯಾಲಿಸಿಸ್‌ನಲ್ಲಿ ಎರಡು ವಿಧ.

ಹಿಮೊ ಡಯಾಲಿಸಿಸ್: ರಕ್ತವನ್ನು ಶುದ್ಧ ಮಾಡಲು ಯಂತ್ರವನ್ನು ಬಳಸಿ ಮಾಡುವ ಈ ಪ್ರಕ್ರಿಯೆಯನ್ನು ಆಸ್ಪತ್ರೆಯಲ್ಲಿ ನಡೆಸಬೇಕಾಗುತ್ತದೆ. ತೊಂದರೆ ಇರುವ ವ್ಯಕ್ತಿಗೆ ವಾರಕ್ಕೆ ಎರಡು ಅಥವಾ ಮೂರು ಬಾರಿ ಇದನ್ನು ನಡೆಸಲಾಗುತ್ತದೆ. ಮೊಣಕೈ ಅಥವಾ ಕುತ್ತಿಗೆಯ ಭಾಗಕ್ಕೆ ಸೂಜಿ ಮತ್ತಿತರ ರಕ್ತಶೋಧಕ ಸಾಧನ ಹಾಕಿ ಮೂತ್ರಪಿಂಡಗಳ ರಕ್ತ ಶುದ್ಧ ಮಾಡುವ ಪ್ರಕ್ರಿಯೆ ಇದಾಗಿದ್ದು, ನಾಲ್ಕು ಗಂಟೆಗಳ ಅವಧಿಯಲ್ಲಿ ಇದು ನಡೆಯುತ್ತದೆ.


ಪೆರಿಟೋನಿಯಲ್ ಡಯಾಲಿಸಿಸ್: ಹೊಟ್ಟೆಯಲ್ಲಿ ಕ್ಯಾತಿಟರ್ ಅಳವಡಿಸಿ ಮಾಡುವ ಚಿಕಿತ್ಸೆ ಇದು. ಕಾರ್ಯವಿಧಾನದ ಸಮಯದಲ್ಲಿ, ಡಯಾಲಿಸೇಟ್ ಎಂಬ ದ್ರವವು ಹೊಟ್ಟೆಯೊಳಗೆ ಹರಿಯುತ್ತದೆ, ಅದು ಎಲ್ಲಾ ತ್ಯಾಜ್ಯ ವಸ್ತುಗಳನ್ನು ಹೀರಿಕೊಳ್ಳುತ್ತದೆ, ಇದು ದೇಹದಿಂದ ಹೊರಹಾಕಲ್ಪಡುತ್ತದೆ. ತಜ್ಞ ಶುಶ್ರೂಷಕರ ಮೇಲ್ವಿಚಾರಣೆಯಲ್ಲಿ ಮನೆಯಲ್ಲೂ ಇದನ್ನು ಮಾಡಿಕೊಳ್ಳಬಹುದು.

### ◆ ಡಯಾಲಿಸಿಸ್ ಯಾವಾಗ ಬೇಕು?

ಮೂತ್ರಪಿಂಡಗಳು ರಕ್ತದಿಂದ ಸಾಕಷ್ಟು ತ್ಯಾಜ್ಯ ಮತ್ತು ದ್ರವವನ್ನು ತೆಗೆದುಹಾಕಲು ಸಾಧ್ಯವಾಗದಿದ್ದಾಗ ಅಥವಾ ಮೂತ್ರಪಿಂಡಗಳು ತಮ್ಮ ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿದಾಗ, ಕಿಡ್ನಿಯು ಸಾಮಾನ್ಯ ಕಾರ್ಯವನ್ನು ಪುನರಾರಂಭಿಸಲು ಡಯಾಲಿಸಿಸ್ ನಡೆಸಲಾಗುತ್ತದೆ.

ಕಿಡ್ನಿ ವೈಫಲ್ಯ ಉಂಟಾದಾಗಲೂ ಡಯಾಲಿಸಿಸ್ ಅನ್ನು ನಡೆಸಲಾಗುತ್ತದೆ. ಡಯಾಲಿಸಿಸ್ ಎನ್ನುವುದು ಒಂದು ಸಪೋರ್ಟಿವ್ ಚಿಕಿತ್ಸೆ.

■



ಜಂಕ್ ಫುಡ್, ಫಾಸ್ಟ್‌ಫುಡ್ ಹೆಚ್ಚಾಗಿ ಸೇವಿಸುತ್ತಿರುವುದು ಮಧುಮೇಹ ಸೇರಿದಂತೆ ಅನೇಕ ಸಮಸ್ಯೆಗಳಿಗೆ ನಾಂದಿ ಹಾಡುತ್ತದೆ.

### ಕಿಡ್ನಿ ಕಸಿ

ಮೂತ್ರಪಿಂಡ ಕಸಿ (ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್) ಎನ್ನುವುದು ಒಂದು ಶಸ್ತ್ರಚಿಕಿತ್ಸಾ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಮೂತ್ರಪಿಂಡ ಹಾನಿಗೊಳಗಾದ ರೋಗಿಗೆ ಇನ್ನೊಬ್ಬ ವ್ಯಕ್ತಿಯಿಂದ ಪಡೆದ ಮೂತ್ರಪಿಂಡವನ್ನು ಕಸಿ ಮಾಡಲಾಗುತ್ತದೆ. ಕೊನೆಯ ಹಂತದ ಮೂತ್ರಪಿಂಡದ ಕಾಯಿಲೆಯಿಂದಾಗಿ ರೋಗಿಯ ಎರಡೂ ಮೂತ್ರಪಿಂಡಗಳು ಹಾನಿಗೊಳಗಾಗಿರುತ್ತವೆ. ಇಂಥ ಸಂದರ್ಭದಲ್ಲಿ ರೋಗಿಗೆ ಬದಲಿ ಮೂತ್ರಪಿಂಡದ ಅವಶ್ಯಕತೆಯಿರುತ್ತದೆ. ಡಯಾಲಿಸಿಸ್‌ನಲ್ಲಿರುವ ರೋಗಿಯ ದೇಹದಿಂದ ಉತ್ಪತ್ತಿಯಾಗುವ ಜೀವಾಣುಗಳ ತೆರವು, ಈ ಪ್ರಕ್ರಿಯೆಯಿಂದ ಸಂಪೂರ್ಣವಾಗಿ ಆಗದೇ ಇದ್ದಾಗ ಡಯಾಲಿಸಿಸ್‌ಗಿಂತ ಭಿನ್ನವಾಗಿ, ಕಿಡ್ನಿ ಕಸಿ ಮಾಡಬೇಕಾಗುತ್ತದೆ. ಇದರ ಪರಿಣಾಮವಾಗಿ ಉತ್ತಮ ಗುಣಮಟ್ಟದ ಜೀವನವನ್ನು ನಡೆಸಬಹುದು.

ಅಂಗಾಂಗ ದಾನ ಹಾಗೂ ದಾನಿಯಿಂದ ಕಿಡ್ನಿ ಪಡೆಯುವ ಸಲುವಾಗಿ ರಾಜ್ಯ ಸರ್ಕಾರದ 'ಜೀವ ಸಾರ್ಥಕತೆ' ಸಂಸ್ಥೆಯಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು.

■